**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 27.03.2025</u>**

**<u>ಪಾಟೀ ಸವಾಲುಃ ಶ್ರೀ. ವೈ ಎ ಎಸ್ ಆರೋಪಿ ಪರ ವಕೀಲರಿಂದಃ</u>**

1. ನಾವು ಒಟ್ಟು 4 ಜನ ಅಣ್ಣ ತಮ್ಮಂದಿರು. ನಾನು ಮತ್ತು ನನ್ನ ಸಹೋದರರು ಸೇರಿಕೊಂಡು ನಮ್ಮ ಚಿಕ್ಕಪ್ಪ ರವರ ವಿರುದ್ದ ಅಸಲು ದಾವಾ ಸಂಖ್ಯೆ.1443/2011 ರಂತೆ ದಾವೆ ಸಲ್ಲಿಸಿರುತ್ತೇವೆ. ಬೆಳ್ಳಳ್ಳಿ ಗ್ರಾಮದ ಸರ್ವೆ ನಂ.53 ರಲ್ಲಿ 4 ಗುಂಟೆ ಆಸ್ತಿಗೆ ಮೇಲ್ಕಂಡ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ 4 ಗುಂಟೆ ಜಮೀನನ್ನು ನಮ್ಮ ಕುಟುಂಬದವರು ಸೈಯದ್ ಮೆಹಬೂಬ್ ಮತ್ತು ಮುರ್ಜ ಮಹಮದ್ ಮೆಹದಿ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಮೇಲ್ಕಂಡ ದಾವೆಯನ್ನು ಸದರಿಯವರ ವಿರುದ್ದ ಸಲ್ಲಿಸಿದ್ದೆವು ಎಂದರೆ ಸರಿ. ನಾವು ಸಲ್ಲಿಸಿದ್ದ ಅಸಲು ದಾವೆಯಲ್ಲಿ ಆರೋಪಿ ಪಕ್ಷಗಾರರಾಗಿಲಿಲ್ಲ ಎಂದರೆ ಸರಿ. ಸದರಿ ದಾವೆಯು ನ್ಯಾಯಾಲಯದಲ್ಲಿ ರಾಜಿಯಾಯಿತು ಎಂದರೆ ಸರಿ. ಆ ರೀತಿ ರಾಜಿ ಆಗುವ ಸಂದರ್ಬದಲ್ಲಿ ಸೈಯದ್ ಮೆಹಬೂಬ್ ಮತ್ತು ಮುರ್ಜ ಮಹಮದ್ ಮೆಹದಿ ರವರು ನಮಗೆ ಹಣ ನೀಡಿದ ನಂತರ ರಾಜಿ ಆಯಿತು ಎಂದರೆ ಸರಿ. ಸದರಿ ರಾಜಿಯಂತೆ ನನಗೆ 2 ಲಕ್ಷದ 50 ಸಾವಿರ ಹಣ ಬಂದಿರುತ್ತದೆ. ಸದರಿ ರಾಜಿಯು ನನ್ನ ಭಾಗಕ್ಕೆ ಒಟ್ಟು 12.5 ಲಕ್ಷಕ್ಕೆ ರಾಜಿಯಾಗಿರುತ್ತದೆ.

2. ಆ ರೀತಿ ರಾಜಿ ಪಂಚಾಯಿತಿಯಲ್ಲಿ ನ್ಯಾಯಾಲಯದಲ್ಲಿ ನನಗೆ ಸಲ್ಲಬೇಕಾಗಿದ್ದ ಹಣವನ್ನು ಚೆಕ್ ಮತ್ತು ನಗದು ರೂಪದಲ್ಲಿ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿ. ಅದೇ ರೀತಿ ನನ್ನ ಸಹೋದರರು ಸಹ ಚೆಕ್ ಮತ್ತು ನಗದು ಹಣ ಪಡೆದುಕೊಂಡು ರಾಜಿ ಅರ್ಜಿಗೆ ಸಹಿ ಮಾಡಿದ್ದರು ಎಂದರೆ ಸರಿ. ಸದರಿ ರಾಜಿ ಪಂಚಾಯಿತಿಯಲ್ಲಿ ಆರೋಪಿಯು ಮುಂದೆ ನಿಂತು ಹಣ ಕೊಡಿಸಿ ರಾಜಿ ಮಾಡಿದ್ದಾರೆ ಎಂದರೆ ಸರಿ. ಆ ರೀತಿ ರಾಜಿ ಪಂಚಾಯಿತಿ ಮಾಡುವ ಮೊದಲು ಆರೋಪಿಯು ನಮ್ಮ ಜೊತೆ ಮಾತುಕತೆ ಮಾಡಿ ಭದ್ರತೆಗಾಗಿ ಚೆಕ್ ನೀಡಿದ್ದರು ಎಂದರೆ ಸರಿ. ರಾಜಿ ಆದ ನಂತರ ಆರೋಪಿಯು ಚೆಕ್ ಗಳನ್ನು ವಾಪಸ್ಸು ನೀಡುವಂತೆ ಕೇಳಿದ್ದರು ಎಂದರೆ ಸರಿ. ಆ ರೀತಿ ರಾಜಿ ಆದ ನಂತರ ಆರೋಪಿಯು ಚೆಕ್ ನ್ನು ವಾಪಸ್ಸು ನೀಡುವಂತೆ ಕೇಳಿದ್ದರೂ, ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸಾಕ್ಷಿ ಹಣ ಕೊಡದೇ ಇದ್ದ ಕಾರಣ ಪ್ರಕರಣ ದಾಖಲು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಸಹೋದರರಿಗೆ ಭದ್ರತೆಗಾಗಿ ಚೆಕ್ ಗಳನ್ನು ನೀಡಿದ್ದರು ಎಂದರೆ ಸರಿ. ಆ ರೀತಿ ರಾಜಿ ಆದ ನಂತರ ಚೆಕ್

ಗಳನ್ನು ವಾಪಸ್ಸು ನೀಡದೇ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸಾಕ್ಷಿ ಹಣ ಕೊಡದೇ ಇದ್ದ ಕಾರಣ ಪ್ರಕರಣ ದಾಖಲು ಮಾಡಿದ್ದೇವೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ವಾಟಿ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**